ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

## Saturday 25th September 2021, Page No.01 and 04

## Civil Services Examination Result of 2020: RVCE Alumni Yatish R 115 Rank



### 2020ನೇ ಸಾಲಿನ ನಾಗರಿಕ ಸೇವೆಗಳ ಪರೀಕ್ಷೆ ಫಲಿತಾಂಶ

# ರಾಜ್ಯದ 22 ಅಭ್ಯರ್ಥಿಗಳು ಆಯ್ಕೆ

**ಹೊಸದಿಲ್ಲಿ:** ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ)ವು 2020ನೇ ಸಾಲಿನ ನಾಗರಿಕ ಸೇವೆಗಳ ಪರೀಕ್ಷೆಯ ಅಂತಿಮ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದೆ. ಒಟ್ಟು 761 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದು, ಇವರಲ್ಲಿ 545 ಪುರುಷ ಮತ್ತು 216 ಮಹಿಳಾ ಅಭ್ಯರ್ಥಿಗಳನ್ನು ನೇಮಕಾತಿಗೆ ಶಿಫಾರಸು ಮಾಡಲಾಗಿದೆ.

UPSC

ಶುಭಂ ಕುಮಾರ್ ಪ್ರಥಮ ರ್‍ಯಾಂಕ್ ಗಳಿಸಿದ್ದು, ಜಾಗೃತಿ ಅವಸ್ಥಿ ಮತ್ತು ಅಂಕಿತಾ ಜೈನ್ ಕ್ರಮವಾಗಿ ಎರಡನೇ ಮತ್ತು ಮೂರನೇ ರ್‍ಯಾಂಕ್ ಪಡೆದಿದ್ದಾರೆ. ರಾಜ್ಯದ 22 ಮಂದಿ ನಾಗರಿಕ ಸೇವೆಗೆ ಆಯ್ಕೆಯಾಗಿದ್ದಾರೆ. ರಾಜ್ಯದ ಅಕ್ಷಯ ಸಿಂಹ ಎಂಬ ಅಭ್ಯರ್ಥಿಗೆ 77ನೇ ರ್‍ಯಾಂಕ್ ದೊರೆತಿದ್ದು ಇವರು ಭಾರತೀಯ ಆಡಳಿತ ಸೇವೆಗೆ ಅರ್ಹತೆ ಪಡೆದಿದ್ದಾರೆ.

ರ್‍ಯಾಂಕ್ ಪಡೆದವರ ಪೈಕಿ ಅಕ್ಷಯ ಸಿಂಹ ಕೆ.ಜೆ-77ನೇ ರ್‍ಯಾಂಕ್ ಪಡೆದು ಮೊದಲ ಸ್ಥಾನದಲ್ಲಿದ್ದಾರೆ. ಆರ್.ಯತೀಶ್- 115, ಎಂ. ನಿಶ್ಚಯ್ ಪ್ರಸಾದ್- 130, ಸಿರಿವೆನ್ನೆಲ-204, ಅನಿರುದ್ಧ್ ಆರ್. ಗಂಗಾವರಂ- 252. ಳ



ಶುಭಂ ಕುಮಾರ್
1ನೇ ರ್‍ಯಾಂಕ್



ಅಕ್ಷಯ ಸಿಂಹ
77ನೇ ರ್‍ಯಾಂಕ್

### ತರಬೇತಿಗೆ ಹಾಜರಾಗದೆ ಸ್ವತಃ ಓದಿದ್ದ ನಿಶ್ಚಯ್

ಮೈಸೂರಿನ ನಿಶ್ಚಯ್ ಪ್ರಸಾದ್ ಯಾವುದೇ ತರಬೇತಿ ಸಂಸ್ಥೆಗಳಿಗೆ ತೆರಳದೆ ಸ್ವತಃ ಅಧ್ಯಯನ ನಡೆಸಿ 130ನೇ ರ್‍ಯಾಂಕ್ ಪಡೆದಿದ್ದಾರೆ. ಈ ಮೂಲಕ ಯಾವುದೇ ಕೋಚಿಂಗ್ ಸೆಂಟರ್‌ಗೆ ತೆರಳದಿದ್ದರೂ ಯುಪಿಎಸ್‌ಸಿ ರ್‍ಯಾಂಕ್ ಪಡೆಯಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಇವರು 2019ರಿಂದ ಅಧ್ಯಯನದಲ್ಲಿ ತೊಡಗಿದ್ದರು.



# ರಾಜ್ಯದ 22 ಅಭ್ಯರ್ಥಿಗಳು ಆಯ್ಕೆ

೧ ಸೂರಜ್.ಡಿ -255, ನೇತ್ರಾ ಮೇಟಿ-326. ಮೇಘಾ ಜೈನ್-354, ಪ್ರಜ್ವಲ್- 367, ಸಾಗರ್ ಎ.ವಾಡಿ- 385, ಜಿ.ಎಸ್. ಅರ್ಜುನ್- 452, ನಾಗರಗೋಜೆ ಶುಭಂ - 453, ಬಿಂದುಮಣಿ.ಆರ್.ಎನ್ -468, ಎಂ.ವಿ.ಮಾಲಾಶ್ರೀ- 504, ಎನ್.ರಾಘವೇಂದ್ರ- 555, ಶಕೀರ್ ಅಹ್ಮದ್ ತೊಂಡಿಖಾನ್ -583, ಪ್ರಮೋದ್ ಆರಾಧ್ಯ ಎಚ್. ಆರ್ -601, ಕೆ. ಸೌರಭ್ - 725, ಪಿ.ಎಸ್. ಸಂದೀಪ್ ಕುಮಾರ್- 741, ವೈಶಾಖ್ ಬಗೀ- 744, ಸಂತೋಷ್ ಎಚ್ -751, ಎಚ್.ವಿ.ಅಮೃತ್- 752 ಪಡೆದಿದ್ದಾರೆ. ಆರ್.ಯತೀಶ್ ಮೂಲತಃ ಕನಕಪುರದವರಾಗಿದ್ದು ಆರ್‌ವಿ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ಸ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ಮೈಸೂರಿನ ನಿಶ್ಚಯ ಪ್ರಸಾದ್ 2019ರಲ್ಲಿ ಬಿ.ಇ ಪದವಿ ಮುಗಿಸಿ ಯುಪಿಎಸ್‌ಸಿ ಅಧ್ಯಯನದಲ್ಲಿ ತೊಡಗಿಕೊಂಡಿದ್ದರು.

### ಬಹುತೇಕರು ಬಿಇ ಪದವೀಧರರು

ಯುಪಿಎಸ್‌ಸಿ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ಬಹುತೇಕರು ಬಿಇ ಪದವೀಧರರಾಗಿದ್ದಾರೆ. ಹಾಗೂ ವಿಜ್ಞಾನ ಹಿನ್ನೆಲೆಯನ್ನು ಹೊಂದಿದ್ದಾರೆ. ಈ ಪೈಕಿ ಬಿಬಿಎಂ ಅನಿರುದ್ಧ ಆರ್.ಗಂಗಾವರಂ ಕೂಡ ರ್‍ಯಾಂಕ್ ಪಡೆದಿದ್ದಾರೆ. ಇವರ ತಾಯಿ ಸ್ಟೆಷನರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಬಿಡುವಿನ ಸಮಯದಲ್ಲಿ ಇವರೂ ತೊಡಗಿಸಿಕೊಳ್ಳುತ್ತಿದ್ದರು.

> ಬ್ಯಾಂಕ್‌ನಲ್ಲಿ ಉದ್ಯೋಗದಲ್ಲಿದ್ದೇನೆ. 2018ರಲ್ಲಿ ಎಂಎಸ್ಸಿ ಪೂರ್ಣಗೊಳಿಸಿದ್ದೇನೆ. ಬೆಂಗಳೂರಿನ ಇನ್‌ಸೈಟ್ಸ್ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದೇನೆ.
>
> ■ ಕೆ.ಜೆ. ಅಕ್ಷಯ್ ಸಿಂಹ, 77ನೇ ರ್‍ಯಾಂಕ್ ಅಭ್ಯರ್ಥಿ